JUNE 26, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

1. ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಹೆಸರು ಮತ್ತು ಮೆಂತೆ ಕಾಳಿನ ಬೀಜಗಳನ್ನು, ಅಕ್ಸಿಯಂ–4 ಬಾಹ್ಯಾಕಾಶ ಯೋಜನೆಗಾಗಿ, ಜೀವಸೂತ್ರ ಪರೀಕ್ಷೆ, 'ಟ್ರಾನ್ಸ್ ಕ್ರಿಪ್ಟೋಮ್' ವಿಶ್ಲೇಷಿಸಲು, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಿದೆ. ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ನೇತೃತ್ವದ, ನಾಲ್ವರು ಗಗನಯಾತ್ರಿಗಳ ತಂಡದೊಂದಿಗೆ, ಬಾಹ್ಯಾಕಾಶದಲ್ಲಿ ಬೀಜಗಳ ಮೊಳಕೆ, ಗಗನಯಾತ್ರಿಗಳ ಆಹಾರ ಪೋಷಣೆಯ ಸಂಶೋಧನಾರ್ಥ, ಹೆಸರು ಮತ್ತು ಮೆಂತೆ ಬೀಜಗಳನ್ನು ರವಾನಿಸಲಾಗಿದೆ ಎಂದು, ಉಪ ಕುಲಪತಿ ಪಿ.ಎಲ್. ಪಾಟೀಲ ತಿಳಿಸಿದ್ದಾರೆ.

<><><>

ಮೈಸೂರಿನ, ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ – ಸಿ.ಎಫ್.ಟಿ.ಆರ್.ಐ. ಸಿದ್ಧಪಡಿಸಿರುವ, ಹಲ್ವಾ ಮೊಸರನ್ನ, ಮಾವಿನ ರಸ, ಹಂಗೇರಿಯಾದ, ಕೆಂಪು ಮೆಣಸಿನ ಮಸಾಲೆಯುಕ್ತ ಚಟ್ನಿಯನ್ನು ಯಾತ್ರೆಯ ವೇಳೆ, ಶುಭಾಂಶು ಹಾಗೂ ಇತರೆ ಮೂವರು ಗಗನಯಾತ್ರಿಗಳು, ಸೇವಿಸಲಿದ್ದಾರೆ.

<><><>

ಇಂದು ಸಂಜೆ 4.30ಕ್ಕೆ, ಅಕ್ಸಿಯಂ–4, ಬಾಹ್ಯಾಕಾಶ ನಿಲ್ದಾಣ ತಲುಪಲಿದೆ. ಭಾರತೀಯ ವಾಯುಪಡೆಯಲ್ಲಿ ಪೈಲಟ್ ಆಗಿರುವ, ಲಕ್ನೋ ಮೂಲದ, ಶುಭಾಂಶು ಶುಕ್ಲಾ, 41 ವರ್ಷಗಳ ಬಳಿಕ, ಅಂತರಿಕ್ಷೆಗೆ ತೆರಳಿದ 2ನೇ ಭಾರತೀಯ ಹಾಗೂ, ಬಾಹ್ಯಾಕಾಶ ನಿಲ್ದಾಣಕ್ಕಿಳಿದ, ಪ್ರಥಮ ಭಾರತೀಯ ಎಂಬ, ಹೆಗ್ಗಳಿಕೆಗೆ ಪಾತ್ರವಾಗಲಿದ್ದಾರೆ.

<><><>

ಶುಭಾಂಶು ಅವರು, 140 ಕೋಟಿ ಭಾರತೀಯರ ಶುಭಾಶಯ, ಭರವಸೆ ಹಾಗೂ ಆಕಾಂಕ್ಷೆಗಳನ್ನು, ತಮ್ಮೊಂದಿಗೆ ಹೊತ್ತೊಯ್ದಿದ್ದಾರೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಎಕ್ಸ್ ಮಾಧ್ಯಮದಲ್ಲಿ ಅಭಿನಂದಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಲೋಕಸಭೆ ವಿಪಕ್ಷ ನಾಯಕ ರಾಹುಲ ಗಾಂಧಿ ಸೇರಿದಂತೆ, ಅನೇಕ ಗಣ್ಯರು, ಶುಭಾಂಶು ಅವರನ್ನು, ಅಭಿನಂದಿಸಿದ್ದಾರೆ.

<><><>

2. ಪ್ರಜಾಪ್ರಭುತ್ವದ ಉಳಿವಿಗಾಗಿ, ತುರ್ತು ಪರಿಸ್ಥಿತಿ ಹೇರಿಕೆ ಎಂಬ, ಚಿತ್ರಣ ನೀಡಿ, ಅಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು, ಸಂವಿಧಾನದ ಮೂಲಕವೇ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದರು ಎಂದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕ ಸು. ರಾಮಣ್ಣ ತಿಳಿಸಿದ್ದಾರೆ.

ಹುಬ್ಬಳ್ಳಿಯ, ವಾಣಿಜ್ಯೋದ್ಯಮ ಸಂಘದ ಸಭಾ ಭವನದಲ್ಲಿ, ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟಿಸ್ ಸಂಘಟನೆ ಆಯೋಜಿಸಿದ್ದ, ತುರ್ತು ಪರಿಸ್ಥಿತಿಯ ಕರಾಳ ದಿನಗಳ ಕುರಿತಾದ, ಭುಗಿಲು ಕೃತಿ ಬಿಡುಗಡೆಗೊಳಿಸಿ, ಅವರು ಮಾತನಾಡಿದರು. ತುರ್ತು ಪರಿಸ್ಥಿತಿ ವೇಳೆ, ಡಿ.ಐ.ಆರ್. ಕಾಯ್ದೆ ಅಡಿ ಬಂಧಿತರಾಗಿದ್ದ, ಅಚ್ಯುತ ಲಿಮಯೆ, ಮಹಾದೇವ ದಿವಟೆ, ಎಚ್.ಜಿ. ಇನಾಮದಾರ, ಶ್ರೀಕಾಂತ ದೇಸಾಯಿ, ವೇದವ್ಯಾಸ ಆಚಾರ್, ಆನಂದ ದೇಸಾಯಿ ಅವರನ್ನು, ಸ್ವತಃ ಜೈಲು ವಾಸ ಅನುಭವಿಸಿದ, ಸು. ರಾಮಣ್ಣ ಸನ್ಮಾನಿಸಿದರು.

<><><>

ತುರ್ತು ಪರಿಸ್ಥಿತಿಯಲ್ಲಿ, ಜೈಲು ವಾಸ ಅನುಭವಿಸಿದ, ಹುಬ್ಬಳ್ಳಿಯ ಹಿರಿಯ ಸಾಮಾಜಿಕ ಕಾರ್ಯಕರ್ತ, ಸುರೇಶ ಸರ'ದೇಶಪಾಂಡೆ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಸುರೇಶ ಸರದೇಶಪಾಂಡೆ ಧ್ವನಿ 40 ಸೆಕೆಂದುಗಳು

<><><>

3. ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯದ ಅಧ್ಯಯನಕ್ಕೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ, ಮೀನಾಕ್ಷಿ ನೇಗಿ ನೇತೃತ್ವದಲ್ಲಿ, ಸಮಿತಿ ರಚನೆಯಾಗಿದೆ. ಮುಂಬರುವ ಆರು ತಿಂಗಳಲ್ಲಿ, ಸಮಗ್ರ ವರದಿ ಸಲ್ಲಿಸುವಂತೆ, ಅರಣ್ಯ ಖಾತೆ ಸಚಿವ, ಈಶ್ವರ ಖಂಡ್ರೆ, ಸಮಿತಿಗೆ ಸೂಚಿಸಿದ್ದಾರೆ.

<><><>

4. ತಾಯಿ–ಮಗುವಿನ ಮಧ್ಯೆ, ಅವಿನಾಭಾವ ಸಂಬಂಧವಿದ್ದು, ಹಾಲೂಡುವ ಮೂಲಕ, ಮಮತೆಯ ಸುಧೆ ಹರಿಯುತ್ತದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಧಾರವಾಡದ ರಾಜೀವ ಗಾಂಧಿ ನಗರದ, ಆತ್ಮಾನಂದ ಸಮುದಾಯ ಭವನದಲ್ಲಿ, ತೀವ್ರತರ ಅತಿಸಾರ ಕೊನೆಗೊಳಿಸುವ ಅಭಿಯಾನಕ್ಕೆ ಚಾಲನೆ ನೀಡಿ, ಮಾತನಾಡಿದರು. ಧಾರವಾಡ ಜಿಲ್ಲೆಯಾದ್ಯಂತ, ಸಾವಿರದ 6 ನೂರಾ 22 ಅಂಗನವಾಡಿ ಕೇಂದ್ರಗಳಲ್ಲಿ, ಕಳೆದ 16 ರಿಂದ, ಜುಲೈ 31ರ ವರೆಗೆ, 45 ದಿನಗಳ ಅಭಿಯಾನ ನಡೆಯಲಿದೆ, ಎಂದರು.

<><><>

5. ಹಾಸನ ಜಿಲ್ಲೆಯಾದ್ಯಂತ ಮುಂದುವರಿದ ಧಾರಾಕಾರ ಮಳೆಗೆ, ಸಕಲೇಶಪುರ ತಾಲೂಕಿನ ಮಾರನಹಳ್ಳಿ ಬಳಿ, ರಾಷ್ಟ್ರೀಯ ಹೆದ್ದಾರಿ 75ರ ಮೇಲೆ, ಗುಡ್ಡ ಕುಸಿದ ಪರಿಣಾಮ, ಮಂಗಳೂರು ಮಾರ್ಗದ, ಶಿರಾಡಿ ಘಾಟ್ ರಸ್ತೆ ಸಂಚಾರ ನಿರ್ಬಂಧಿಸಿ, ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

<><><>

6. ಪ್ರಸಕ್ತ ಸಾಲಿನ, ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಆಪ್ ಬಿಡುಗಡೆ ಮಾಡಿದ್ದು, ರೈತರು ತಮ್ಮ ಬೆಳೆಗಳ ಮಾಹಿತಿಯನ್ನು, ಬೆಳೆ ಸಮೀಕ್ಷೆ ಆಪ್‌ನಲ್ಲಿ ಕಡ್ಡಾಯವಾಗಿ ನೊಂದಾಯಿಸುವಂತೆ, ಕೃಷಿ ಇಲಾಖೆ ಕೋರಿದೆ.

<><><>

7. ಯೇಸುವಿನ ಪವಿತ್ರ ಹೃದಯದ ಹಬ್ಬ, ಯೇಸು ಕ್ರಿಸ್ತರ ಅಮಿತ ಪ್ರೇಮ, ಬಲಿದಾನ ಹಾಗೂ ಮಾನವತೆಯ ಸ್ಪರ್ಷದ ಸಂಕೇತವಾಗಿದೆ. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಒಳಗೊಂಡ, ಧರ್ಮಕ್ಷೇತ್ರ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿದೆ.

<><><>

10. ಆಕಾಶವಾಣಿಯ ಮನ್ ಕಿ ಬಾತ್‌ನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬರುವ ಭಾನುವಾರ, 29 ರಂದು ಬೆಳಗ್ಗೆ 11 ಗಂಟೆಗೆ, ದೇಶ ವಿದೇಶಗಳ ಭಾರತೀಯರೊಂದಿಗೆ, ತಮ್ಮ ಅನಿಸಿಕೆ ಹಂಚಿಕೊಳ್ಳಲಿದ್ದಾರೆ. ಇದು, ಮನದ ಮಾತು ಸರಣಿಯ 123ನೇ ಆವೃತಿಯಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.